ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಯ ಮತ್ತು ಪಾಲನೆ ವಿಭಾಗ, ಚಂದಾಪುರ,
ಬೆ.ವಿ.ಕಂ, ಬೆಂಗಳೂರು-560081

**BANGALORE ELECTRICITY SUPPLY COMPANY**
(A Government of Karnataka Undertaking)
O&M Division, CHANDAPURA
BESCOM, Bangalore-560081
E-Mail: eechndpr.work@gmail.com

P-82/176

ಕ್ರಮಾಂಕ: ಕಾ.ನಿ.ಇಂ(ವಿ)/ಸ.ಕಾ.ನಿ.ಇಂ(ಕ)/ಸ.ಇಂ(ತಾಂ)/2025-26/ 12433-34 ದಿನಾಂಕ : 06/02/26

ರವರಿಗೆ,

ಶ್ರೀಮತಿ. ದೀಪಾ ಎಂ, ಬಿನ್ ಲೇಟ್ ಟಿ. ಮುನಿರೆಡ್ಡಿ
ಸರ್ವೇ ನಂ-78/6, ಬಂಡೆನಲ್ಲಸಂದ್ರ ಗ್ರಾಮ,
ಜಿಗಣಿ ಪುರಸಭೆ ಕಾರ್ಯಲಯ ವ್ಯಾಪ್ತಿ,
ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು.
ಮೊಬೈಲ್ ನಂ-9900667812

ಸ್ವಯಂ ಕಾರ್ಯನಿರ್ವಹಣೆ ಯೋಜನೆ-
ವಿದ್ಯುತ್ ಮಂಜೂರಾತಿ

ಮಾನ್ಯರೆ,

ವಿಷಯ: ತಾವು ಸರ್ವೇ ನಂ-78/6, ಬಂಡೆನಲ್ಲಸಂದ್ರ ಗ್ರಾಮ, ಜಿಗಣಿ ಪುರಸಭೆ ಕಾರ್ಯಲಯ ವ್ಯಾಪ್ತಿ, ಆನೇಕಲ್ ತಾಲ್ಲೂಕು ಇಲ್ಲಿ ಹೊಸದಾಗಿ ಕೋರಿರುವ ನೀರಾವರಿ ಪಂಪ್‌ಸೆಟ್ ಗೆ, 10 ಹೆಚ್.ಪಿ ವಿದ್ಯುತ್ ಭಾರವನ್ನು ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಮಂಜೂರಾತಿಯನ್ನು ನೀಡುತ್ತಿರುವ ಬಗ್ಗೆ.

ಉಲ್ಲೇಖ:
1. ಸ.ಕಾ.ನಿ.ಇಂ (ವಿ), ಜಿಗಣಿ ಉಪವಿಭಾಗ, ರವರ ಪತ್ರ ಸಂಖ್ಯೆ: 8257/ 03.02.2026.
2. ಅರ್ಜಿ ಸಂಖ್ಯೆ : 1324112250100/30-12-2025. LTNCIP-53.
3. GST Circular Refrence no. BESCOM/BC 49/GM(CT&GST)/DGM/AGM(CT&GST) /F-3/2024-25/CYS-48/Dt:29-11-2024

********

ನಿಮ್ಮ ಮನವಿಯಲ್ಲಿ ನೀವು ಕೋರಿರುವಂತೆ 10 ಹೆಚ್.ಪಿ ವಿದ್ಯುತ್ ಭಾರವನ್ನು ಕೆ.ಇ.ಆರ್.ಸಿ ನಿಯಮ 4 ಹಾಗೂ 6 ರ ಪ್ರಕಾರ ಈ ಕೆಳಗೆ ಸೂಚಿಸಿರುವ ಷರತ್ತುಗಳ ಮೇರೆಗೆ ಮಂಜೂರು ಮಾಡಲಾಗಿದೆ ಹಾಗೂ ಮಂಜೂರಾತಿಯು ಈ ದಿನಾಂಕದಿಂದ 90 ದಿವಸಗಳವರೆಗೆ ಚಾಲ್ತಿಯಲ್ಲಿರುತ್ತದೆ.

1. ನೀವು ಕೋರಿರುವ ಪ್ರಮಾಣ 10 ಹೆಚ್.ಪಿ.
2. ಸದರಿ ಸ್ಥಾವರಕ್ಕೆ ಹಾಲಿ ಇರುವ ಎಫ್-08 Agree feeder ಫೀಡರ್, 66/11 Jigani ಉಪ ವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜು ಮಾಡಲಾಗುವುದು.
3. ಚಾಲ್ತಿಯಲ್ಲಿರುವ ಎಲ್.ಟಿ.-4(a) ಜಕಾತಿಯು ನಿಮ್ಮ ಸ್ಥಾವರಕ್ಕೆ ಅನ್ವಯಿಸಲ್ಪಡುತ್ತದೆ.
4. ಈ ಕೆಳಕಂಡ ಠೇವಣಿ/ಶುಲ್ಕಗಳನ್ನು ಸ.ಕಾ.ನಿ.ಇಂ(ವಿ), ಬೆ.ವಿ.ಕಂ, ಜಿಗಣಿ ಉಪ-ವಿಭಾಗ ರವರ ಹೆಸರಿನಲ್ಲಿ DD ಯನ್ನು ತೆಗೆದು, 90 ದಿವಸಗಳೊಳಗೆ ಜಿಗಣಿ ಉಪ-ವಿಭಾಗ ಕಛೇರಿಯಲ್ಲಿ ಪಾವತಿಸುವುದು. ಇಲ್ಲವಾದಲ್ಲಿ ನಿಯಮಾನುಸಾರ ತಮ್ಮ ಅರ್ಜಿಯನ್ನು ರದ್ದುಗೊಳಿಸಿ, ಅರ್ಜಿ ನೋಂದಣಿ ಶುಲ್ಕವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

| ಕ್ರ.ಸಂ | ವಿವರಗಳು | ಒಟ್ಟು ಶುಲ್ಕ |
|---|---|---|
| | ಅಂದಾಜು ಪಟ್ಟಿಯ ಒಟ್ಟು ಮೊತ್ತ : 2,78,319/- | |
| 1 | ಭದ್ರತಾ ಠೇವಣಿ | |
| | ಬಿ) 10 ಹೆಚ್.ಪಿ * 01 ಸಂಖ್ಯೆ<br>ಜಕಾತಿ ಎಲ್.ಟಿ.-4(a) ( 16,600/-) | 16,600-00 |
| 2 | ಮೇಲ್ವಿಚಾರಣಾ ಶುಲ್ಕ @ 5% ( ವಿದ್ಯುತ್ ಪರಿವೀಕ್ಷಣಾ ಶುಲ್ಕವನ್ನು ಹೊರತುಪಡಿಸಿ, (ರೂ.2,69,819) | 13,491-00 |
| 3 | ಪರಿವರ್ತಕ ಪರೀಕ್ಷಾ ಶುಲ್ಕ | 1,000-00 |
| 4 | ಎಲ್ ಟಿ ಮೀಟರಿಂಗ್ ಬಾಕ್ಸ್ | 6,332-00 |
| ಒಟ್ಟು ಪಾವತಿ ಮಾಡಬೇಕಾದ ಮೊತ್ತ | | 37,423-00 |



Scanned with CamScanner

ಮೇಲೆ ತಿಳಿಸಲಾಗಿರುವ ಶುಲ್ಕಗಳು / ಠೇವಣಿಗಳು ತಾತ್ಕಾಲಿಕವಾಗಿದ್ದು, ಸದರಿ ಶುಲ್ಕಗಳು / ಠೇವಣಿಗಳು ಮಾನ್ಯ ಕೆ.ಇ.ಆರ್.ಸಿ ಮತ್ತು ಬೆ.ವಿ.ಕಂ ನಿಂದ ಕಾಲ-ಕಾಲಕ್ಕೆ ಹೊರಡಿಸುವ ಅಥವಾ ಹೊರಡಿಸಲಾಗಿರುವ ಆದೇಶಗಳು/ತಿದ್ದುಪಡಿಗಳ ಮೇಲೆ ಮತ್ತು ಸದರಿ ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭಗಳಲ್ಲಿ ಕಾಮಗಾರಿಗೆ ಬಳಸುವ ಸಾಮಾಗ್ರಿಗಳ ನಿಜವಾದ ಬಳಕೆಯ ಮೇಲೆ ಅವಲಂಬಿತವಾಗಿರುತ್ತದೆ. ಆದುದರಿಂದ, ನೀವು ಭವಿಷ್ಯದಲ್ಲಿ ಕಂಪನಿಯಿಂದ ತಿಳಿಸುವ ಯಾವುದೇ ಪರಿಷ್ಕೃತ ಅಥವಾ ವ್ಯತ್ಯಾಸದ ಶುಲ್ಕಗಳು/ಠೇವಣಿಗಳನ್ನು ಪಾವತಿಸಲು ಬದ್ಧರಾಗಿರತಕ್ಕದ್ದು).

1. ಈ ಮೇಲ್ಕಂಡ ಹಣ ಪಾವತಿಸಿ, ಪಾವತಿ ದೃಢೀಕರಣ ಪತ್ರದೊಂದಿಗೆ ಸ್ವಯಂ ಕಾಮಗಾರಿಯಲ್ಲಿ ಕಾರ್ಯನಿರ್ವಹಿಸುವ ಬಗ್ಗೆ ರೂ. 500/- ಛಾಪಾ ಕಾಗದದ ಮೇಲೆ (ನಿಗದಿತ ನಮೂನೆಯಲ್ಲಿ) ಮುಚ್ಚಳಿಕೆಯನ್ನು ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಕಾಮಗಾರಿಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಜಿಗಣಿ ಉಪವಿಭಾಗ, ಬೆ.ವಿ.ಕಂ ರವರ ಮೇಲ್ವಿಚಾರಣೆಯಲ್ಲಿ "ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ" ಮಂಜೂರಾದ ಅಂದಾಜು ಪಟ್ಟಿಯಂತೆ/ ನಕ್ಷೆಯಂತೆ ನಿರ್ವಹಿಸುವುದು ಹಾಗೂ ಕಾಮಗಾರಿ ನಿರ್ವಹಣೆ ಸಂದರ್ಭದಲ್ಲಿ ಕ್ಷೇತ್ರ ಪರಿಸ್ಥಿತಿಗನುಗುಣವಾಗಿ ಅಂದಾಜು ಪಟ್ಟಿಯಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಬೇಕಾದಲ್ಲಿ ನಿಗಮದ ಅಧಿಕಾರಿಗಳ ಮಾರ್ಗದರ್ಶನದಂತೆ ಸದರಿ ಬದಲಾವಣೆ/ ಮಾರ್ಪಾಡುಗಳನ್ನು ಒಪ್ಪಿ ನಿರ್ವಹಿಸಲು ತಾವು ಬದ್ಧರಾಗಿರಬೇಕು.
3. ಒಂದು ಕಂಬದ ವಿನ್ಯಾಸದಲ್ಲಿ ಅಥವಾ ಬೆಡ್ಡಿಂಗ್ ಮೇಲೆ ಪರಿವರ್ತಕವನ್ನು ಅಳವಡಿಸಲು ನಿಮ್ಮ ಆವರಣದೊಳಗೆ ನೆಲ ಮಹಡಿಯಲ್ಲಿ ಮುಖ್ಯದ್ವಾರದ ಹತ್ತಿರದಲ್ಲಿ 3 ಮೀ x 5 ಮೀ ಅಳತೆಯುಳ್ಳ ಆಕಾಶಕ್ಕೆ ತೆರೆದಿರುವ ಸ್ಥಳವನ್ನು ಒದಗಿಸಬೇಕು. ಎಲ್ಲಾ ಸಾಮಾಗ್ರಿಗಳನ್ನು ಸಂಬಂಧಪಟ್ಟ ಟಿ.ಎ.ಕ್ಯೂ.ಸಿ./ಕಾ.ನಿ.ಇಂ(ವಿ)ರವರು ಪರಿಶೀಲಿಸಿದ ನಂತರ ಸ್ವಯಂ ಕಾಮಗಾರಿ ಕೆಲಸ ನಿರ್ವಹಿಸುವುದು.
4. ಕಾಮಗಾರಿಯಲ್ಲಿ ಬಳಸುವ ಸಾಮಾಗ್ರಿಗಳನ್ನು <u>ಬೆ.ವಿ.ಕಂ ಅನುಮೋದಿತ ಸರಬರಾಜುದಾರರಿಂದಲೇ</u> ಖರೀದಿಸುವುದು ಹಾಗೂ ಖರೀದಿಸಿದ ಸಾಮಾಗ್ರಿಗಳನ್ನು ಬಳಸುವ ಮುನ್ನ ಹಾಗೂ ನಂತರ ಬೆ.ವಿ.ಕಂ ಅಧಿಕಾರಿಗಳಿಂದ ಪರೀಕ್ಷಿಸಿ ಹಾಗೂ ದೃಢೀಕರಣ ಪಡೆಯುವುದು ಹಾಗೂ ಕಾಮಗಾರಿಗೆ ಬಳಸಿರುವ ಎಲ್ಲಾ ಸಾಮಾಗ್ರಿಗಳ ಪರಿಶೀಲನಾ ಪತ್ರವನ್ನು ಕಂಪನಿಗೆ ಸಲ್ಲಿಸುವುದು.
5. ಮುಖ್ಯ ಪ್ಯಾನೆಲ್ ಮತ್ತು ವಿತರಣಾ ಪ್ಯಾನಲ್‌ಗಳ ನಕ್ಷೆ ಮತ್ತು ವಿನ್ಯಾಸಗಳನ್ನು ಬೆ.ವಿ.ಕಂ ನ ಸಂಬಂಧಪಟ್ಟ ವಿಭಾಗದಿಂದ ಅನುಮೋದನೆ ಪಡೆಯತಕ್ಕದ್ದು ಮತ್ತು ಮಾಸ್ಟರ್ ಮಾಪಕವನ್ನು ಅಳವಡಿಸುವುದು.
6. ತಾವು ಹೊಸದಾಗಿ ಸ್ಥಾಪಿಸುವ 1•25 ಕೆ.ವಿ.ಎ (Oil type) ಪರಿವರ್ತಕದಿಂದ ತಮಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು.
7. ತಮಗೆ ವಿದ್ಯುತ್ ಸಂಪರ್ಕವನ್ನು ಮೂರು ಫೇಸ್ 01 ಸಂಖ್ಯೆ 5-30 ಆಂಪ್ಸ್ ಮಾಪಕವನ್ನು ಅಳವಡಿಸಿ, ಸರಬರಾಜು ಮಾಡಲಾಗುವುದು. ತಾವು ನಿಯಮಾನುಸಾರ ತಮ್ಮ ವೆಚ್ಚದಲ್ಲಿ ಈ ಮಾಪಕವನ್ನು ಖರೀದಿಸುವುದು.
8. ಕಾಮಗಾರಿಯನ್ನು ಅನುಮೋದಿತ ನಿರ್ಧಾರಿತ ಕಾರ್ಯವಿಧಾನದಲ್ಲಿ (ಅನುಮೋದಿತ ಸ್ಟ್ಯಾಂಡರ್ಡ್ ಪ್ರ್ಯಾಕ್ಟೀಸ್ ಅನುಗುಣವಾಗಿ) ನಿರ್ವಹಿಸತಕ್ಕದ್ದು.
9. ಈ ಕಾಮಗಾರಿಯನ್ನು ನಿರ್ವಹಿಸುವ ಸಮಯದಲ್ಲಿ ಯಾವುದೇ ಕಾನೂನಿನ ಅಡತಡೆಗಳು ಬಂದರೇ ಅದಕ್ಕೆ ಬೆವಿಕಂ ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗಿರುವುದಿಲ್ಲ.
10. ಕಾಮಗಾರಿಯನ್ನು ನಿರ್ವಹಿಸುವ ಸಂದರ್ಭದಲ್ಲಿ ಸಂಭವಿಸಬಹುದಾದ ಯಾವುದೇ ರೀತಿಯ ವಿದ್ಯುತ್ ಅಪಘಾತ/ಹಾನಿ/ಆಸ್ತಿ-ಪಾಸ್ತಿ ನಷ್ಟಗಳಿಗೆ ತಾವೇ ನೇರ ಜವಾಬ್ದಾರರಾಗಿದ್ದು, ಕಂಪನಿಯು ಯಾವುದೇ ರೀತಿಯಲ್ಲೂ ಅದಕ್ಕೆ ಜವಾಬ್ದಾರಿಯಾಗಿರುವುದಿಲ್ಲ.
11. ಕಾಮಗಾರಿ ಪೂರ್ಣಗೊಂಡ ನಂತರ ಸಂಬಂಧಪಟ್ಟ ಬೆ.ವಿ.ಕಂ ಅಧಿಕಾರಿಗಳೊಡನೆ ಬಳಸಿದ ಸಾಮಾಗ್ರಿಗಳ ಜಂಟಿ ತಪಸೀಲು ಮಾಡುವುದು. ಪರಿಶೀಲನೆ ಸಂದರ್ಭದಲ್ಲಿ ಕಾಮಗಾರಿಯಲ್ಲಿ/ ಬಳಸಲಾದ ಸಾಮಾಗ್ರಿಗಳಲ್ಲಿ ಕಂಡುಬರುವ ಎಲ್ಲಾ ರೀತಿಯ ಲೋಪದೋಷಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಸರಿಪಡಿಸುವುದು.
12. ಕಾಮಗಾರಿಯಲ್ಲಿ ಬಳಸಿದ ಸಾಮಾಗ್ರಿಗಳಿಗೆ ಹಾಗೂ ಕಾಮಗಾರಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆ ತಮ್ಮ ವತಿಯಿಂದ ಒಂದು ವರ್ಷದ ಅವಧಿಯ ಖಾತರಿಯನ್ನು ನೀಡಬೇಕು.
13. ಕಾಮಗಾರಿಯು ಪೂರ್ಣಗೊಂಡ ನಂತರ ಎಲ್ಲಾ ಸೇವಾ ಮಾರ್ಗಗಳು ಹಾಗೂ ಸಂಬಂಧಿತ ಎಲ್ಲಾ ಪೂರಕ ಸಾಮಾಗ್ರಿಗಳನ್ನು ಬೆ.ವಿ.ಕಂ.ಯ ವಶಕ್ಕೆ ನೀಡಬೇಕು ಹಾಗೂ ಅಲ್ಲಿಂದ ಮುಂದೆ ಅದರ ಮಾಲೀಕತ್ವವು ಬೆ.ವಿ.ಕಂ ಯದ್ದಾಗಿರುತ್ತದೆ.
14. ಅನುಮೋದಿತ ಕಾಮಗಾರಿಯನ್ನು ಕಾರ್ಯಾದೇಶ ನೀಡಿದ ದಿನದಿಂದ <u>ಮೂರು ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವುದು,</u> ಇಲ್ಲದಿದ್ದಲ್ಲಿ ಸದರಿ ಕಾರ್ಯಾದೇಶವು ಅನೂರ್ಜಿತವಾಗುತ್ತದೆ.
15. ನಿರ್ಮಿಸಿರುವ ವಿದ್ಯುತ್ ಮಾರ್ಗ/ಚಾಲಕ್ಕೆ ಸರ್ಕಾರಿ ವಿದ್ಯುತ್ ಪರಿವೀಕ್ಷಣಾಲಯ ದಿಂದ ಅನುಮತಿಯನ್ನು ಪಡೆದು ಸಲ್ಲಿಸುವುದು.
16. ಉಳಿದಂತೆ, ವಿದ್ಯುತ್ ಮಂಜೂರಾತಿ/ ವಿದ್ಯುತ್ ಜಾಲ ನಿರ್ಮಾಣಕ್ಕೆ ಸಂಬಂಧಪಟ್ಟಂತೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ತನ್ನ ನಿಯಮಾವಳಿಯಲ್ಲಿ ಕಾಲಾನುಕಾಲಕ್ಕೆ ಹೊರಡಿಸುವ/ ಚಾಲ್ತಿಯಲ್ಲಿರುವ ನಿಯಮಗಳಿಗೆ ಬದ್ಧರಾಗಿರುವುದು.
17. ಈ ಪತ್ರದಲ್ಲಿ ನಮೂದಿಸಿರುವ ಠೇವಣಿಗಳನ್ನು ಪಾವತಿಸಿದ ನಂತರ, ವೈರಿಂಗ್ ನಕ್ಷೆ, ಗುತ್ತಿಗೆದಾರರ ಸಮಾಪನಾ ವರದಿ ಮತ್ತು ಒಪ್ಪಂದ ಪ್ರತಿಗಳನ್ನು ಸಂಬಂಧಪಟ್ಟ ಉಪ-ವಿಭಾಗದಲ್ಲಿ ಸಲ್ಲಿಸುವುದು.
18. ತಮ್ಮ ಸ್ಥಾವರಕ್ಕೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಮೊದಲು ಅವಶ್ಯಕವಿರುವ ಕಡೆ ನಿಯಾಮಾನುಸಾರ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ / ಅಗ್ನಿಶಾಮಕ ಮತ್ತು ಸುರಕ್ಷತೆ / ಇತರೇ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು, ಪ್ರತಿಯನ್ನು ದಾಖಲೆಗೆಂದು ಕಡ್ಡಾಯವಾಗಿ ಬೆ.ವಿ.ಕಂ ಗೆ ಸಲ್ಲಿಸುವುದು.



Scanned with CamScanner

19. ವಿದ್ಯುತ್ ಸಂಪರ್ಕಕ್ಕಾಗಿ ನೀವು ಸಲ್ಲಿಸಿರುವ ಬಿ.ಬಿ.ಎಂ.ಪಿ./ಬಿ.ಎಂ.ಆರ್.ಡಿ.ಎ./ನಗರ ಪಾಲಿಕೆ/ಗ್ರಾಮ ಪಂಚಾಯಿತಿಯಿಂದ ಅನುಮೋದಿಸಿದಂತ ನಕ್ಷೆ / ಮಾಲೀಕತ್ವದ ದಾಖಲೆಗಳು / ಜನರಲ್ ಲೈಸೆನ್ಸ್ ಹಾಗು ಇತರೆ ದಾಖಲಾತಿಗಳು ನಕಲಿ/ಸುಳ್ಳು ಎಂದು ಕಂಡು ಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ನಿಮಗೆ ಮಂಜೂರು ಮಾಡಿರುವ ವಿದ್ಯುತ್ ಸಂಪರ್ಕವನ್ನು ಶಾಶ್ವತವಾಗಿ ಕಡಿತಗೊಳಿಸಲಾಗುವುದು ಮತ್ತು ನೀವು ಬೆ.ವಿ.ಕಂ.ಗೆ ಪಾವತಿಸಿರುವ ಠೇವಣಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20. ಕೊಳವೆ ಬಾವಿ ಇದ್ದಲ್ಲಿ ನಿಮಗೆ ಹಿರಿಯ ಭೂ ವಿಜ್ಞಾನಿ, ಅಂತರ್ಜಲ ಇಲಾಖೆ, ರವರಿಂದ ಅನುಮತಿ /ನೊಂದಣಿ ಪತ್ರ ಸಲ್ಲಿಸಿದ ನಂತರವೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

21. ವಿದ್ಯುತ್ ಸರಬರಾಜು ಪಡೆಯಲು ಸುತ್ತೋಲೆ ಪ್ರಕಾರ ನಿಯಮಗಳು ಮತ್ತು ನಿಬಂಧನೆಗಳನ್ನು ಪಾಲಿಸಬೇಕು ಸುತ್ತೋಲೆ ನಂ: CGM(OP)/DGM-3/BC-05/F-341/2025-26/CYS-02/Dated:04-04-2025

22. ಸ್ವಯಂ ಕಾರ್ಯ ನಿರ್ವಹಣಾ ಯೋಜನೆಯಡಿ ನಿರ್ವಹಿಸುವ ಕಾಮಗಾರಿಗಳಲ್ಲಿ ಭೂಗತ ಕೇಬಲ್ ಅನ್ನು ಅಳವಡಿಸುವ ಕಾಮಗಾರಿ ಸೇರಿಕೊಂಡಿದ್ದಲ್ಲಿ, ಅಂತಹ ಕಾಮಗಾರಿಗಳ ನಿರ್ವಹಣೆಯನ್ನು ಕೇಬಲ್ (ವರ್ಕ್ಸ್ ಮತ್ತು ನಿರ್ವಹಣೆ) ವಿಭಾಗದವರು ಮೇಲ್ವಿಚಾರಣೆ ಮಾಡಬೇಕಾಗಿದ್ದು, ಕಾಮಗಾರಿಯನ್ನು ಮುಗಿದ ನಂತರ ಕೇಬಲ್ (ವರ್ಕ್ಸ್ ಮತ್ತು ನಿರ್ವಹಣೆ) ವಿಭಾಗದ ಸಿಬ್ಬಂಧಿ ಮತ್ತು ಟಿ.ವಿ & ಕ್ಯೂಸಿ ರವರು ಜಂಟಿಯಾಗಿ ದೃಢೀಕರಿಸುವುದು.

ಈ ಕಾಮಗಾರಿಯನ್ನು ಸ್ವಯಂ ಕಾಮಗಾರಿ ಯೋಜನೆಯಡಿಯಲ್ಲಿ ದರ್ಜೆ-1 ವಿದ್ಯುತ್ ಗುತ್ತಿಗೆದಾರರ ಮುಖಾಂತರ ನಿರ್ವಹಿಸತಕ್ಕದ್ದು ಹಾಗೂ ಕಾಮಗಾರಿ ನಿರ್ವಹಿಸುವ ಮುಂಚೆ ಸಂಬಂಧಪಟ್ಟ ಬೆವಿಕಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಜಿಗಣಿ ಉಪವಿಭಾಗ . ಸಹಾಯಕ ಇಂಜಿನಿಯರ್ (ವಿ) / ಕಿರಿಯ ಇಂಜಿನಿಯರ್ (ವಿ) ರವರನ್ನು ಸಂಪರ್ಕಿಸಿ ಅವರ ಮಾರ್ಗದರ್ಶನದಲ್ಲಿ ಅವಶ್ಯವಾದ ಎಲ್ಲಾ ರೀತಿಯ ಸುರಕ್ಷತಾ ವಿಧಾನ ಮತ್ತು ಸಲಕರಣೆಗಳನ್ನು ಉಪಯೋಗಿಸಿ, ಬೆವಿಕಂ / ಇತರೆ ಕೇಬಲ್ / ವಿದ್ಯುತ್ ಮಾರ್ಗಗಳನ್ನು ಹಾಳು ಮಾಡದೇ (ಡ್ಯಾಮೇಜ್ ಮಾಡದೇ) ಕಾರ್ಯನಿರ್ವಹಿಸುವ ನಿಬಂಧನೆಗಳಿಗೆ ಒಳಪಟ್ಟು, ತಮಗೆ ವಿದ್ಯುತ್ ಮಂಜೂರಾತಿಯನ್ನು ನೀಡಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕಾರ್ಯನಿರ್ವಾಹಕ ಇಂಜಿನಿಯರ್ (ವಿ),
ವಾ, ಕಾರ್ಯ ಮತ್ತು ಪಾಲನೆ ವಿಭಾಗ,
ಬೆ.ವಿ.ಕಂ, ಚಂದಾಪುರ.





Scanned with CamScanner